**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ|| ಕೆ.ಗೋವಿಂದರಾಜ್ ಇವರು ನಿಯಮ-72ರಡಿಯಲ್ಲಿ ಸಲ್ಲಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ಸೂಚನೆ:**

**ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ-2024 ಅಡಿಯಲ್ಲಿ ಬಿಬಿಎಂಪಿ ವ್ಯಾಪ್ತಿಯನ್ನು ಗ್ರೇಟರ್ ಬೆಂಗಳೂರು ಪ್ರದೇಶ ಎಂದು ಗುರುತಿಸಿ 2025ರ ಮೇ 15ರಿಂದ ಜಾರಿಗೊಳಿಸಲಾಗಿದೆ. ಗ್ರೇಟರ್ ಬೆಂಗಳೂರು ಪ್ರದೇಶದಲ್ಲೇ ಐದು ನಗರ ಪಾಲಿಕೆಗಳನ್ನು ರಚಿಸಲಾಗಿದ್ದು, ಜನಸಂಖ್ಯೆ, ವಿಸ್ತೀರ್ಣ, ಜನಸಂಖ್ಯಾ ಸಾಂದ್ರತೆ, ಉತ್ಪತ್ತಿಯಾಗುವ ಆದಾಯ, ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗ ಪ್ರಮಾಣ, ಆರ್ಥಿಕ ಪ್ರಾಮುಖ್ಯತೆಯನ್ನು ಪರಿಗಣಿಸಿ ಉತ್ತಮ ಹಾಗೂ ಪರಿಣಾಮಕಾರಿ ಆಡಳಿತಕ್ಕಾಗಿ ಈ ಐದು ನಗರ ಪಾಲಿಕೆಗಳನ್ನು ರಚಿಸಲಾಗಿದೆ. ಇದೊಂದು ಸ್ತುತ್ಯಾರ್ಹ ಕ್ರಮವಾಗಿದೆ.**

**ಇದೇ ರೀತಿ, ಉದ್ಯೋಗ, ಶಿಕ್ಷಣ, ವ್ಯಾಪಾರಕ್ಕೆಂದು ನಗರಕ್ಕೆ ಬರುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದೆ. ನಗರೀಕರಣದ ಜೊತೆಗೆ, ಅಪರಾಧ ಪ್ರಕರಣಗಳು, ನಗರದಲ್ಲಿ ಹೆಚ್ಚಾಗುತ್ತಿವೆ. ಮನೆಗಳ್ಳತನ, ಮಹಿಳೆಯರು ಹಾಗೂ ಮಕ್ಕಳ ಮೇಲಿನ ದೌರ್ಜನ್ಯ, ಸೈಬರ್ ಅಪರಾಧ ಪ್ರಕರಣಗಳು, ದ್ವಿಚಕ್ರ ವಾಹನಗಳ ಕಳ್ಳತನ, ರಸ್ತೆ ಅಪಘಾತ ಪ್ರಕರಣಗಳು, ವೀಲಿಂಗ್ ಹಾವಳಿ ಮುಂತಾದವು ಗಣನೀಯ ಪ್ರಮಾಣದಲ್ಲಿ ಹೆಚ್ಚುತ್ತಿವೆ. ಅಪರಾಧ ಪ್ರಕರಣಗಳನ್ನು ಕಡಿಮೆ ಮಾಡುವುದು, ತನಿಖೆಯಲ್ಲಿ ಗುಣಮಟ್ಟ ಹೆಚ್ಚಿಸುವುದು ಹಾಗೂ ಆರೋಪಿಗಳನ್ನು ತ್ವರಿತವಾಗಿ ಬಂಧಿಸಿ ಕ್ರಮ ಕೈಗೊಳ್ಳಲು ನೆರವಾಗಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮರು ವಿಂಗಡಿಸಿದಂತೆ, ಬೆಂಗಳೂರು ಪೊಲೀಸ್ ಕಮೀಷನರೇಟನ್ನು ಎರಡು ವಿಭಾಗಗಳನ್ನಾಗಿ ವಿಂಗಡಿಸಿ, ಹಾಲಿ ಇರುವ ಪೊಲೀಸ್ ಆಯುಕ್ತರ ಜೊತೆಗೆ ಮತ್ತೊಂದು ಪೊಲೀಸ್ ಆಯುಕ್ತರ ಹುದ್ದೆಯನ್ನು ಹೊಸದಾಗಿ ಸೃಜಿಸಿ, ಇದರನುಸಾರ ಉಳಿದ ಸಂಬಂಧಿತ ಪೊಲೀಸ್ ಅಧಿಕಾರಿ/ಸಿಬ್ಬಂದಿ ಹುದ್ದೆಗಳನ್ನು ಸೃಜಿಸುವ ತುರ್ತು ಹಾಗೂ ಸಾರ್ವಜನಿಕ ಮಹತ್ವದ ಕುರಿತು ನಿಯಮ-72 ರಡಿ ಸನ್ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.**

**ಉತ್ತರ:**

ಬೆಂಗಳೂರು ನಗರ ಪೊಲೀಸ್ ಕಮಿಷನರೇಟ್‌ನ ವ್ಯಾಪ್ತಿಯು 741 ಚದರ ಕಿಲೋಮೀಟರ್ ಪ್ರದೇಶವನ್ನು ಒಳಗೊಂಡಿದ್ದು, ಸುಮಾರು 140 ಲಕ್ಷ ಜನಸಂಖ್ಯೆಯಿದ್ದು, ಸಹಸ್ರಾರು ಜನರು ಕೆಲಸದ ನಿಮಿತ್ತ ಬಂದು ಹೋಗುತ್ತಾ ಇರುತ್ತಾರೆ. ಬೆಂಗಳೂರು ನಗರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಕಛೇರಿಗಳು ಮತ್ತು ಪೊಲೀಸ್ ಠಾಣೆಗಳ ಮಾಹಿತಿಯು ಕೆಳಕಂಡಂತಿದೆ (ಸಂಚಾರ ಒಳಗೊಂಡಂತೆ):-

| ಕ್ರ ಸಂ | ಪೊಲೀಸ್ ಕಛೇರಿ/ಪೊಲೀಸ್ ಠಾಣೆ | ಸಂಖ್ಯೆ |
|---|---|---|
| 1. | ವಿಭಾಗಗಳು | 15 |
| 2. | ಉಪ ವಿಭಾಗಗಳು | 36 |
| 3. | ಪೊಲೀಸ್ ಠಾಣೆಗಳು | 185 |

...2)

ಬೆಂಗಳೂರು ನಗರದಲ್ಲಿ ಕಳೆದ 03 ವರ್ಷಗಳಲ್ಲಿ ವರದಿಯಾದ ಪ್ರಮುಖ ಅಪರಾಧಗಳು ಈ ಕೆಳಕಂಡಂತಿದೆ:-

| ಕ್ರ ಸಂ | ಅಪರಾಧದ ವಿಧ | ಪ್ರಕರಣಗಳ ಸಂಖ್ಯೆ | | |
|---|---|---|---|---|
| | | 2023 | 2024 | 2025 |
| 1. | ಮನೆಗಳ್ಳತನ | 2905 | 2392 | 1240 |
| 2. | ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ | 4079 | 4064 | 2066 |
| 3. | ಸೈಬರ್ ಅಪರಾಧ | 17697 | 17692 | 6201 |
| 4. | ವಾಹನ ಕಳ್ಳತನ | 6165 | 5575 | 2707 |
| 5. | ರಸ್ತೆ ಅಪಘಾತ | 5269 | 5027 | 2840 |
| 6. | ವೀಲಿಂಗ್ ಪ್ರಕರಣಗಳು | 256 | 543 | 566 |

ಬೆಂಗಳೂರು ನಗರದಲ್ಲಿ ತನಿಖೆಯ ಗುಣಮಟ್ಟವನ್ನು ಹೆಚ್ಚಿಸಲು ತನಿಖಾಧಿಕಾರಿಗಳಿಗೆ ನುರಿತ ತಜ್ಞರಿಂದ ತರಬೇತಿ ಕಾರ್ಯಗಾರಗಳನ್ನು ನಿಯತವಾಗಿ ಹಮ್ಮಿಕೊಂಡು ಕ್ರಮ ವಹಿಸಲಾಗುತ್ತಿದ್ದು, ನೂತನ ತಂತ್ರಾಂಶಗಳನ್ನು ಅಳವಡಿಸಿಕೊಂಡು ಆರೋಪಿಗಳ ಪತ್ತೆ ಮತ್ತು ಡಿಜಿಟಲ್ ಸಾಕ್ಷ್ಯಾಧಾರಗಳ ಮಾಹಿತಿ ಕಲೆ ಹಾಕಲು ಕ್ರಮವಹಿಸಲಾಗುತ್ತಿದೆ. ಸಿ.ಡಿ.ಆರ್. ಅನಾಲಿಸಿಸ್ ನಿಂದ, ಸಿ.ಸಿ.ಟಿ.ವಿ. ಫೂಟೇಜ್ ಗಳಿಂದ, ಫಿಂಗರ್ ಪ್ರಿಂಟ್ ಮತ್ತು ಫೂಟ್ ಪ್ರಿಂಟ್‌ಗಳಿಂದ (NAFIS & AFIS ತಂತ್ರಾಂಶಗಳ ಬಳಕೆ), ವೈದ್ಯಕೀಯ ವರದಿಗಳಿಂದ (ಡಿ.ಎನ್.ಎ & ಎಫ್.ಎಸ್.ಎಲ್) ಮಾಹಿತಿ ಪಡೆಯಲಾಗುತ್ತಿದ್ದು, SOCO ಅಧಿಕಾರಿಗಳ ನೇಮಕ ಮತ್ತು ತಂತ್ರಜ್ಞಾನ ಆಧಾರಿತ ಮಾಹಿತಿಗಳ ಪರಿಶೀಲನೆ ಹಾಗೂ ಸೈಬರ್ ಅಪರಾಧಗಳ ತನಿಖೆಯಲ್ಲಿ ಸಹಕರಿಸಲು ನುರಿತ ತಜ್ಞರನ್ನು ನೇಮಕ ಮಾಡಿಕೊಂಡು ತನಿಖೆಯಲ್ಲಿ ನೆರವಿಗಾಗಿ ಕ್ರಮವಹಿಸಲಾಗಿದೆ.

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಆಯುಕ್ತರ ಕಛೇರಿಯೊಂದಿಗೆ ಮತ್ತೊಂದು ಪೊಲೀಸ್ ಆಯುಕ್ತರ ಕಛೇರಿಯನ್ನು ಆರಂಭಿಸುವ ಕುರಿತು ಪ್ರಸ್ತುತ ಯಾವುದೇ ಪ್ರಸ್ತಾವನೆಯು ಪರಿಶೀಲನೆಯಲ್ಲಿರುವುದಿಲ್ಲ.

**ಸಂಖ್ಯೆ: ಹೆಚ್‌ಡಿ 167 ಪಿಓಪಿ 2025**

**(ಡಾ|| ಜಿ.ಪರಮೇಶ್ವರ)**
ಗೃಹ ಸಚಿವರು.